# ರಾಷ್ಟ್ರೋತ್ಕರ್ಷ ಕಾವ್ಯ ರಾಮಾಯಣ ; ರಾಷ್ಟ್ರಪುರುಷ ರಾಮ

ಸುರೇಶ್ ಕುಮಾರ್

ಭಾರತದುದ್ದಕ್ಕೂ ಅವತಾರ ಪುರುಷ ಶ್ರೀರಾಮನ ದಿವ್ಯವ್ಯಕ್ತಿತ್ವವು ಯುಗಯುಗಗಳಿಂದಲೂ ಜನಸಾಮಾನ್ಯರನ್ನು ಪ್ರಭಾವಿಸುತ್ತ ಬಂದಿದೆ. ಮಹಾಕವಿ ವಾಲ್ಮೀಕಿಯ ಲೇಖನಿಯಿಂದ ಮೂಡಿಬಂದ ರಾಮಾಯಣ ಕಾವ್ಯವು ನಮ್ಮ ನಾಡಿನ ಸಾಂಸ್ಕೃತಿಕ ವೈಭವದ ದ್ಯೋತಕವಾಗಿದೆ. ಈ ಕುರಿತು ಇಲ್ಲಿ ಚಿಂತಿಸಿರುವ ಲೇಖಕರು ಆಧ್ಯಾತ್ಮಿಕ ಬರಹಗಾರರು ಹಾಗೂ ಭಾಷಣಕಾರರು. ಸಮಾಜ ಸೇವಾ ಕರ್ತರೂ ಆಗಿರುವ ಅವರು ಬೆಂಗಳೂರು ನಿವಾಸಿಗಳು.



ರಾಮಾಯಣವು ಪರಮಸುಂದರವಾದದ್ದು. ಪರಮ ಮಂಗಳಕರವಾದದ್ದು. ಭರತಖಂಡದ ಸಾವಿರಾರು ವರ್ಷದ ಜೀವನ ಯಾತ್ರೆಯಲ್ಲಿ ಅದು ಮಾರ್ಗಜ್ಯೋತಿಯಾಗಿದೆ. ವಂದನೀಯ, ಪೂಜನೀಯ, ಆದರಣೀಯ, ಅನುಕರಣೀಯ, ಅನುನಯವಾಗಿ ಬಂದಿದೆ. ಜೀವನೋದ್ಧಾರಕ್ಕೆ ಲಕ್ಷ್ಯವಾದ ಲಕ್ಷ ಲಕ್ಷ ಮೌಲಿಕ ವಿಚಾರಗಳನ್ನು ಕೊಡುತ್ತ ಬಂದಿದೆ. ಇವೆಲ್ಲವೂ ಆಯಾ ಕಾಲಕ್ಕೆ, ದೇಶಕ್ಕೆ ಪ್ರಸ್ತುತವಾಗಿವೆ. ನಾವಿರುವ ಕಾಲಘಟ್ಟದಲ್ಲಿ ನಿಂತು ರಾಮಾಯಣವನ್ನು ನಾವು ನೋಡಬೇಕು.

ವಾಲ್ಮೀಕಿ ರಾಮಾಯಣದ ಉಪಜೀವಿಗಳ ಪಟ್ಟಿ ದೊಡ್ಡದು. ಇದನ್ನು ಆಧರಿಸಿ ಪದ್ಯ, ಗದ್ಯ, ಪ್ರಬಂಧ, ಕಥೆ, ಕಾದಂಬರಿ, ನಾಟಕ, ಚಂಪೂ ಇತ್ಯಾದಿ ಹಲವಾರು ಪ್ರಕಾರದ ಸಾಹಿತ್ಯ ನಿರ್ಮಾಣವಾಗಿವೆ. ರಾಮರಹಸ್ಯ, ರಾಮತಾಪಿನೀ ಉಪನಿಷದ್, ಅಧ್ಯಾತ್ಮ ರಾಮಾಯಣ, ಗೋವಿಂದ, ತಿಲಕ, ಭೂಷಣ ವ್ಯಾಖ್ಯಾನಗಳು, ತುಲಸೀ ರಾಮಾಯಣ ಮುಂತಾದ ನೂರಾರು ಗ್ರಂಥಗಳು ವೇದಾಂತಿಗಳಿಗೆ ಪರತತ್ತ್ವ ಪ್ರಕರಣ ಗ್ರಂಥಗಳಾಗಿವೆ. ಹೀಗಾಗಿಯೇ ಕುಮಾರ ವ್ಯಾಸನು 'ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ, ತಿಂತಿಣಿಯ ರಘುವರನ ಚರಿತದಲಿ ಕಾಲಿಡಲು ತೆರಪಿಲ್ಲ' ಎಂದು ಹೇಳಿ ಭಾರತವನ್ನು ಬರೆದನು.

ಅವರವರ ಕ್ಷಮತೆಗೆ ತಕ್ಕಂತೆ, ಅವರವರ ಆಸಕ್ತಿಯ ವಿಷಯಗಳ ಬಗ್ಗೆ ಸ್ವಾರಸ್ಯಕರವಾಗಿ ಇಲ್ಲೆಲ್ಲ ಕಥಾನಿರೂಪಣೆಯಾಗಿದೆ. ಅವುಗಳ

ಲ್ಲಿನ ಶಬ್ದ, ಸಂವಾದ, ಪಾತ್ರಪೋಷಣೆ, ಧಾಟಿ, ಲಾಲಿತ್ಯ, ಓಜಸ್ಸು, ಛಂದಸ್ಸು , ವ್ಯಾಕರಣ, ನವರಸಗಳ ಪುಷ್ಟಿ, ಭಕ್ತಿ ಇತ್ಯಾದಿಗಳು ಆಸಕ್ತ ವೃಂದದ ಮೆಚ್ಚುಗೆ ಗಳಿಸಿವೆ.

ಆದರೆ ಇವೆಲ್ಲವೂ ಫೋಟೋ ಇದ್ದಂತೆ. ಎಷ್ಟೇ ವರ್ಣನೆಯಾದರೂ ಅದೊಂದು ಚಿತ್ರವಾಗುವುದು. ಮೂಲದ ಸೌಂದರ್ಯವನ್ನು ಬಿಂಬದಲ್ಲಿ ಸವಿಯಲಾದೀತೆ? ಅಮರನಾಥ, ಮಾನಸ ಸರೋವರ, ಕೈಲಾಸ ಪರ್ವತಗಳ ಸೊಗಸು ನೋಟವನ್ನು ಸವಿಯಲು ಅಲ್ಲಿಗೆ ಹೋಗುವುದರ ಹೊರತಾಗಿ ಬೇರೆ ದಾರಿಯೇನಿದೆ? ಹಾಗೆಯೇ ರಾಮಾಯಣದ ಸರ್ವೋತ್ತಮ ವಿಚಾರಗಳನ್ನು, ನಿತ್ಯನೂತನ ಹರಿದ್ವರ್ಣದ ಜೀವನಮೌಲ್ಯಗಳನ್ನು ತಿಳಿಯಲು ರಾಮಾಯಣದ ಸಾಗರದಲ್ಲಿ ಮುಳುಗಬೇಕು. ಆ ಸಾಗರದ ನಡುವಿನ ದ್ವೀಪಗಳಲ್ಲಿ ಸಂಚರಿಸಬೇಕು. ಆ ಸಾಗರದ ದಂಡೆಯ ಪ್ರದೇಶಗಳಲ್ಲಿ ಅಲೆದಾಡಬೇಕು. ಅಲ್ಲಿಯ ಪರ್ವತ-ಶಿಖರಗಳನ್ನು ಏರಿಳಿಯಬೇಕು. ಅರ್ಥಾತ್ ರಾಮಾಯಣದ ಪ್ರತಿಯೊಂದು ಅಕ್ಷರದ ಸಾರವನ್ನು ಸವಿಯಬೇಕು. ಉಪಯೋಗವಿಲ್ಲದ ಒಣ ಚರ್ಚೆಗೆ ಇಲ್ಲಿ ಅವಕಾಶವಿಲ್ಲ. ಇದರ ಬಗ್ಗೆ ಮಾತನಾಡಬಯಸುವವರು ಮೊದಲಿಗೆ ಒಮ್ಮೆ ಶಾಂತವಾಗಿ, ಯಾವುದೇ ಪೂರ್ವಾಗ್ರಹವಿಲ್ಲದೆ ವಾಲ್ಮೀಕಿ ರಾಮಾಯಣವನ್ನು ಮೊದಲಿನಿಂದ ಕಡೆಯವರೆಗೆ ಓದಬೇಕು. ಅನಂತರ ವಿಚಾರ ಮಾಡಬೇಕು.

ಗ್ರಂಥದ ಸ್ವರೂಪವೇನು? ಇದು ಶಾಸ್ತ್ರವೋ? ಚರಿತ್ರೆಯೋ? ಕಾವ್ಯವೋ? ಶಾಸ್ತ್ರ ತೊರೆಯದ, ಚರಿತ್ರೆಯ ಆಧಾರವಾಗಿರುವ ಮಹಾಕಾವ್ಯ. ಇಲ್ಲಿ ವಾಸ್ತವಿಕ ವಿಷಯ, ಶಾಸ್ತ್ರ ಅಸ್ಥಿಪಂಜರವಾಗಿದೆ. ಪುಷ್ಟಿ ಕೊಟ್ಟಿರುವುದು ಚರಿತ್ರೆಯ ಕಾವ್ಯಸ್ವರೂಪ. ಮೂರೂ ಪರಸ್ಪರ ಪೂರಕ. ಶರೀರದ ಗಟ್ಟಿಭಾಗವಾದ ಮೂಳೆಗೆ ಪುಷ್ಟಿ ರಕ್ತ, ಮಾಂಸ ಹಾಗೂ ಚರ್ಮಗಳಿಂದ ಆದಂತೆ. ಏನನ್ನೋ ಗೀಚುವುದು ಕಾವ್ಯದ ಲಕ್ಷಣವಲ್ಲ. ಅರ್ಥವಿಲ್ಲದ ೨-೪-೬ ಅಕ್ಷರಗಳ ಸಾಲು ಕಾವ್ಯವಲ್ಲ. ಮಾನವನ ಹೃದಯದಲ್ಲಿ ಅವನಿಗೆ ಇಷ್ಟವೆನಿಸುವ, ಇತರರಿಗೂ, ತನಗೂ ಹಾನಿಯಾಗದ ಧನಾತ್ಮಕ ನವ ರಸಾನುಭವದ ಆರ್ದ್ರತೆಯಾಗುವುದು ಕಾವ್ಯ. ಹಾಗೆಯೇ ಮುಂದುವರಿದು ಅವನ ಮನಸ್ಸು-ಬುದ್ಧಿಯಲ್ಲಿ ಸಂಸ್ಕಾರವಾಗಿ, ಆ ವಿಚಾರಗಳು ಅವನ ನಿತ್ಯದ ಆಚರಣೆಯಲ್ಲಿ ತರಲು ಸ್ವಾಭಾವಿಕವಾಗಿ ಪ್ರೇರಣೆ ಕೊಡುವುದು ಕಾವ್ಯ. ಇದಕ್ಕೆ ಆಧಾರವಾಗಿರುವ ಅರ್ಥಗರ್ಭಿತ ವಾಕ್ಯಗಳ ಸಮೂಹವೇ ಕಾವ್ಯ. ರಾಮಾಯಣದಲ್ಲಿ ಮನುಷ್ಯ ಜೀವನದ್ದೇ ಚಿತ್ರಣವಿದೆ. ಇಲ್ಲಿ ಮಾತು ಉಕ್ಕಿ ಹರಿದಿದೆ. ಸಹಜವಾಗಿ ಹೊರಹೊಮ್ಮುವ ಮನಸ್ಸಿನ ಭಾವನೆಗಳೇ ಕಾವ್ಯ.

**ಕವಿ:** ಪ್ರಶಾಂತ ತಮಸಾ ನದಿಯ ತೀರ. ಶಾಂತವಾಗಿ ಹರಿದಿರುವ ನದಿಯ ಮೆಲ್ಲನೆಯ ಜುಳುಜುಳು ನಾದ. ಸುತ್ತಲ ಸೊಬಗಿನ ಪರಿಸರ. ಚಾಮರದಂತೆ ಬೀಸುತ್ತಿರುವ ತಂಗಾಳಿ. ಮೋಡಗಳಿಲ್ಲದ ನೀಲಾಕಾಶ. ಹಕ್ಕಿಗಳ ಚಿಲಿಪಿಲಿ ನಾದ. ಪ್ರಕೃತಿ ಮಾತೆಯ ಸೌಮ್ಯ ಸಂಗೀತದ ತನನನ ... ಹಾಡಿರುವಾಗ, ಮರವೊಂದರಲ್ಲಿ ಆಡುತ್ತಿರುವ ಗಂಡು-ಹೆಣ್ಣು ಕ್ರೌಂಚ ಪಕ್ಷಿಗಳು. ಅದನ್ನು ನೋಡುತ್ತಿರುವ ವಾಲ್ಮೀಕಿ ಮಹರ್ಷಿಗಳು. ಅದೇ ಪಕ್ಷಿಗಳನ್ನು ನೋಡುತ್ತಿರುವ ಬೇಡನೂ ಒಬ್ಬ. ನೋಡುತ್ತಿರುವಂತೆಯೇ ಬಾಣವನ್ನು ಹೂಡಿ ಗಂಡು ಪಕ್ಷಿಯನ್ನು ಕೊಂದನು. ಮಹರ್ಷಿಗಳ ಮನಸ್ಸು ಕೂಡಲೇ ಸ್ಪಂದಿಸಿತು:

**ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ ।**
**ಯತ್ಕ್ರೌಂಚ ಮಿಥುನಾದೇಕಂ ಅವಧೀಃ ಕಾಮಮೋಹಿತಮ್** ॥

ಇದನ್ನು ಹೇಳಿದ ಕೂಡಲೇ ಅವರ ಮನದಲ್ಲಿ ಪಶ್ಚಾತ್ತಾಪವಾಯಿತು. ಶೋಕವು ಶ್ಲೋಕವಾಯಿತು. ಮಹಾತ್ಮರ ಮನಸ್ಸಿನಲ್ಲಿನ ಭಾವನೆಗಳ ಪರಿಣಾಮ ಹೀಗೆ.

ಮರದಲಿ ಆಡಿಹ ಹಕ್ಕಿಗಳಂದ
ಬೇಡನು ಬಾಣದಿ ಗಂಡನು ಕೊಂದ
ಮುನಿದ ಮುನಿಯ ಹೃದಯದಿಂದ
ಹೊರಹೊಮ್ಮಿತು ರಾಮಾಯಣ ಮಕರಂದ

ಆದ್ದರಿಂದಲೇ ಭಾರತೀಯರ ದೃಷ್ಟಿಯಲ್ಲಿ ಋಷಿಯಾದವನೇ ಕವಿಯಾಗಲು ಸಾಧ್ಯ. 'ನಾನೃಷಿಃ ಕುರುತೇ ಕಾವ್ಯಂ' - ಋಷಿ ಮನೋಭಾವವಿಲ್ಲದವನು ಕಾವ್ಯ ರಚಿಸಲಾರ.. ನವರಸಗಳ ಮೂಲಕ ಅವನು ತ್ರಿಗುಣಾತ್ಮಕ ಕಾವ್ಯಪ್ರಪಂಚವನ್ನು ನಿರ್ಮಿಸಿ, ಅದಕ್ಕೆ ಆಕರ್ಷಿತರಾದ ಜನರು ಅದರಲ್ಲಿಯೇ ತಮ್ಮ ಮೂಲ ಮರೆಯದಂತೆ ಮಾಯಾಸಾಹಿತ್ಯ ನಿರ್ಮಿಸದೆ, ಬಣ್ಣದ ಮೋಡದ ನಂತರ ಶುಭ್ರ ನೀಲಾಕಾಶದಂತೆ, ತ್ರಿಗುಣಾತ್ಮಕ ಚಿತ್ರಣದಿಂದ ತ್ರಿಗುಣಾತೀತ ಶಾಂತಿ ಧಾಮದಲ್ಲಿ ನೆಲೆಸುವಂತಹ ರಸನಿರ್ಮಾಣವೇ ಕಾವ್ಯ. ಇವೆಲ್ಲವೂ ರಾಮಾಯಣದಲ್ಲಿವೆ. ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಬೀಭತ್ಸ, ರೌದ್ರ, ಶಾಂತ - ನವರಸಗಳು. ಓದಲು, ಹಾಡಲು, ನುಡಿಸಲು ಬರುವುದು. ಕೇಳಲು ಮಧುರವಾಗಿರುವುದು. ಷಡ್ಜಾದಿ ಸಪ್ತಸ್ವರದಲ್ಲಿ ಹೊಂದಿಕೊಳ್ಳುವುದು. ಜೊತೆಯಲ್ಲಿ ಸಂಸ್ಕಾರವೂ ಆಗುವುದು. ಇದೇ ಕಾವ್ಯ. ಇದೇ ಸೌಂದರ್ಯ ದರ್ಶನ. ಶರೀರ, ಇಂದ್ರಿಯಕ್ಕೆ ಬೇಕಾಗುವ ಶೃಂಗಾರದ ರಸಗಳೊಡನೆ, ಬುದ್ಧಿ, ಮನಸ್ಸು, ಆತ್ಮಕ್ಕೆ ಬೇಕಾದ ಶಾಂತಾದಿ ಸಂಸ್ಕಾರ ಗುಣಗಳೂ ಬೇಕು.

ಮನುಷ್ಯನು ಪ್ರಪಂಚವನ್ನು ತಾನು ತಿಳಿದುಕೊಳ್ಳುವುದಕ್ಕೂ, ಪ್ರಪಂಚಕ್ಕೆ ತನ್ನನ್ನು ತಿಳಿಯಪಡಿಸಿಕೊಳ್ಳುವುದಕ್ಕೂ ಮುಖ್ಯವಾಗಿ ಎರಡು ಸಾಧನಗಳಿವೆ. ಮೊದಲನೆಯದು ಹೃದಯ. ಎರಡನೆಯದು ಬುದ್ಧಿ. ಕಣ್ಣು , ಕಿವಿ ಮೊದಲಾದ ಇಂದ್ರಿಯಗಳೂ ಅವುಗಳ ಆಶ್ರಯ ಸ್ಥಾನಗಳಾಗಿರುವ ದೇಹಾಂಗಗಳೂ ಈ ಎರಡಕ್ಕೂ ಉಪಕರಣಗಳಾಗಿರುತ್ತವೆ. ಹೃದಯವನ್ನು ಸಂಸ್ಕಾರದಿಂದ ಬಲಪಡಿಸುವ ವಿದ್ಯೆ ಕಲೆ. ಬುದ್ಧಿಯನ್ನು ಸಂಸ್ಕಾರದಿಂದ ಬಲಪಡಿಸುವ ವಿದ್ಯೆ ಶಾಸ್ತ್ರ.

**ಕಲೆ:** ಕಲೆಯು ಹೃದಯದ ಮೃದು ಕೋಮಲ ಭಾವಗಳನ್ನು ಮೇಲಕ್ಕೆಬ್ಬಿಸಿ ಅದನ್ನು ಸಂಸ್ಕಾರಗೊಳಿಸುತ್ತದೆ. ಕಲೆಯ ಮುಖ್ಯ ರೂಪಗಳು ನಾಲ್ಕು. ೧) ಕಾವ್ಯ ೨) ಸಂಗೀತ ೩) ನಾಟ್ಯ ಮತ್ತು ೪) ಚಿತ್ರಶಿಲ್ಪ. ಹೃದಯದ ಕಾವಿನಿಂದ ಕಾವ್ಯ, ಅಲ್ಲಿಯ ಕಲಕಿನಿಂದ ಕಲೆ. ಇದರಲ್ಲಿ ಸಂಗೀತವು ಮನಸ್ಸನ್ನು ಕಲಕಬೇಕು. ಹಾಗಾಗದಿದ್ದರೆ ಅದು ಸಂಗೀತವಲ್ಲ, ಏನೋ ಸದ್ದು. ಸಂಗೀತವನ್ನು ಕೇಳಿದವನ ಎದೆಯಲ್ಲಿ ಒಂದು ಶೋಕವೋ, ಕನಿಕರವೋ, ಒಂದು ನಲಿವೋ, ಮುನಿಸೋ,

ಫಲವೋ ಯಾವುದೋ ಒಂದು ಹೃದಯ ಭಾವವನ್ನು ಆ ಸಂಗೀತವು ಕಲಕಬೇಕು. ಈ ಕಲಕಾಟವನ್ನು ಯಾವ ನಾದ ಪ್ರವಾಹ ಉಂಟು ಮಾಡಬಲ್ಲುದೋ ಅದಕ್ಕೆ ಸಂಗೀತವೆಂಬ ಹೆಸರು ಸಲ್ಲುತ್ತದೆ. ಆದ್ದರಿಂದ ಸಂಗೀತದ ಮೂಲಸ್ಥಾನವು ಹೃದಯ. ಕಲೆಯ ಪರಿಣಾಮ ರಸ. ಇದೇ ನಾಟ್ಯ ಮತ್ತು ಚಿತ್ರಶಿಲ್ಪಗಳಿಗೂ ಅನ್ವಯಿಸುತ್ತದೆ.

**ಶಾಸ್ತ್ರ:** ಶಾಸ್ತ್ರದ ಮುಖ್ಯ ಗುಣ ಯಥಾರ್ಥ. ಅದು ಪ್ರತ್ಯಕ್ಷ ಪ್ರಮಾಣವುಳ್ಳದ್ದು. ಅದರ ರುಜುವಾತು ತರ್ಕದಿಂದಲೂ, ಸಕಲ ಜನ ಸಮ್ಮತಿಯಿಂದಲೂ ಬರುತ್ತದೆ. ಇದಕ್ಕೆ ಪದ, ಚರ್ಚೆ ಬೇಕು. ಕಾವ್ಯಕ್ಕೆ, ಕಲೆಗೆ ರಸವೇ ಸತ್ಯ; ಯಾಥಾರ್ಥ್ಯವೇ ಶಾಸ್ತ್ರಕ್ಕೆ ಸತ್ಯ. ಜೀವನಕ್ಕೆ ಇವೆರಡೂ ಬೇಕು. ಹೃದಯ-ಕಲೆ, ಬುದ್ಧಿ-ಶಾಸ್ತ್ರ-ಇವುಗಳು ಸತಿ, ಪತಿಗಳಂತಿರಲು, ಹೊಂದಿಕೊಂಡಿರಲು ಜೀವನಸೌಂದರ್ಯ ದರ್ಶನವಾಗುತ್ತದೆ. ರಸ ಮತ್ತು ತರ್ಕ ಒಂದುಗೂಡಿದರೆ ಬದುಕು ಶ್ರೀಮಂತವಾಗುತ್ತದೆ. ಇದಕ್ಕೆ ಬೇಕಾದ್ದೆಲ್ಲವೂ ಶ್ರೀರಾಮಾಯಣದಲ್ಲಿದೆ. ರಾಮಾಯಣದ ಸಂದೇಶವೇ ಹೀಗಿದೆ.

**ಕಾವ್ಯಕಲಾ ರಸ:** ಕುಶ-ಲವರು ಹಾಡುವಾಗ ಋಷಿಗಳು ಕಾಣಿಕೆ ಕೊಟ್ಟಿದ್ದು. ಅಂಗದೇಶದ ಕ್ಷಾಮ ನಿವಾರಣೆಗೆ ಋಷ್ಯಶೃಂಗ, ವೇಶ್ಯೆಯರ ಭಾವನೆಗಳು ಇತ್ಯಾದಿ - ಹೀಗೆ ನೈಜ ಸ್ವರೂಪದಲ್ಲಿ ನೆಲೆಗೊಳಿಸುವುದೇ ಕಾವ್ಯ. ಕಾವ್ಯದ ಈ ಉದ್ದೇಶ ರಾಮಾಯಣಕ್ಕಿದೆ. ಭೋಜನರಸ ಬಾಯಿಗಿದ್ದಂತೆ, ಗಾನರಸ ಕಿವಿಗಿದ್ದಂತೆ, ರೂಪ, ಲಾವಣ್ಯರಸ ಕಣ್ಣಿಗಿದ್ದಂತೆ ಕಾವ್ಯ ಕಲಾರಸ ಮನಸ್ಸಿಗೆ ಅಪ್ಯಾಯಮಾನವಾದದ್ದು ಕಾವ್ಯ. ಕೇವಲ ಇಷ್ಟೇ ಅಲ್ಲದೆ ಇದರೊಡನೆ ಜೀವನವನ್ನು ಪರಿಷ್ಕಾರಗಳಿಸುವುದು ಕಾವ್ಯದ ಮಹಾನತೆ. ಈ ಮಹಾನತೆಯಲ್ಲಿ ಮೊದಲ ಸ್ಥಾನ ರಾಮಾಯಣಕ್ಕೆ. ಹಾಗಾಗಿಯೇ ಸಹಸ್ರಾರು ವರ್ಷಗಳಾದರೂ ಇಂದಿಗೂ ಜೀವಂತವಾಗಿದೆ.

ಹೀಗಾಗಿ ರಾಮಾಯಣದೆಡೆಗೆ ನಾವು ಬಾಗಿದ್ದೇವೆ. ಸಾಗಿದ್ದೇವೆ. ಅಯನವೆಂದರೆ ಎಡೆಗೆ, ಉತ್ತರಾಯನ-ಸೂರ್ಯನ ರಥ ದಕ್ಷಿಣ ಪಥದಿಂದ ಉತ್ತರಕ್ಕೆ, ದಕ್ಷಿಣಾಯನ-ಸೂರ್ಯನ ರಥ ಉತ್ತರದಿಂದ ದಕ್ಷಿಣಕ್ಕೆ. ರಾಮಾಯಣವೆಂದರೆ ಇಕ್ಷ್ವಾಕು ವಂಶದ, ಸೂರ್ಯಕುಲದ ಮರ್ಯಾದಾ ಪುರುಷೋತ್ತಮ ಶ್ರೀರಾಮನೆಡೆಗೆ, ಇಂದಿಗೂ ಜೀವಂತ ಜೀವನಮೌಲ್ಯಗಳಿರುವ ಶ್ರೀರಾಮಾಯಣದ ಕಥಾಸಾಗರದೆಡೆಗೆ.

ಭರತವರ್ಷದಲ್ಲಿ ಅಸಂಖ್ಯಾತ ರಾಜ-ಮಹಾರಾಜರಾಗಿದ್ದರೂ ರಾಮನೇ ಆದರ್ಶ. ಮುಖ್ಯ ಕಾರಣವೆಂದರೆ ಅವನು ಬದುಕಿದ್ದು ಪ್ರಜಾಹಿತಕ್ಕಾಗಿ, ಸಮಾಜದ, ರಾಷ್ಟ್ರದ ಶ್ರೇಯೋಭಿವೃದ್ಧಿಗಾಗಿ. ಅದನ್ನೇ ಭಗವಂತನ, ಧರ್ಮದ, ಈಶ್ವರೀಯ ಕಾರ್ಯವೆಂದು ತಿಳಿದರು. ಹೀಗಾಗಿ ಜನತೆ ಅವರ ಉದಾತ್ತ-ಉತ್ತಮ ಗುಣಗಳನ್ನು ಕೊಂಡಾಡಿ ಪ್ರಭುಗಳೆಂದು ಹೃದಯ ಸಿಂಹಾಸನದಲ್ಲಿ ಕೂರಿಸಿ ಭಕ್ತಿ-ಪ್ರೀತಿಯಲ್ಲಿ ಅಭಿಷೇಕ ಮಾಡಿದರು. ಆದ್ದರಿಂದಲೇ ಹಿರಿಯರು ರಾಮ ನಡೆದಂತೆ ನಡೆ ಎಂದಿದ್ದಾರೆ. ಶ್ರೀರಾಮನ ಮೊದಲ ವನಯಾತ್ರೆ ಭಯೋತ್ಪಾದಕರಾಗಿದ್ದ ತಾಟಕಿ, ಸುಬಾಹು-ಮಾರೀಚರ ಸಂಹಾರಕ್ಕೆ. ರಾಮನ ಜೀವನದ ಸಂದೇಶದಂತೆ ನಡೆದರೆ ನಮಗೆ ಮಂಗಳ. ಶ್ರೀರಾಮ ಬಾಳಿ-ಬದುಕಿದ ಚರಿತ್ರೆ ಭವ್ಯವಾದದ್ದು. ಶ್ರೀರಾಮನದ್ದು ಉಪದೇಶವಿಲ್ಲ, ಎಲ್ಲವೂ ನಡೆಯೇ. ತಂದೆ, ತಾಯಿ, ಬಂಧು, ಬಳಗ, ಸೋದರ, ಗೆಳೆಯ, ದಾಸ, ಪತ್ನಿ, ಶತ್ರು, ಪಶು, ಪಕ್ಷಿ, ಪ್ರಾಣಿ, ಕಪಿ, ಕರಡಿ, ರಾಕ್ಷಸ ಇವರುಗಳಲ್ಲಿನ ರಾಘವನ ಪ್ರೀತಿ, ಈ ವೈಶ್ವಿಕ ಪ್ರಜ್ಞೆ ಅಮೂಲ್ಯ. ರಾಮಾಯಣಕ್ಕೆ ಅದ್ಭುತ ಪರಿವರ್ತನೆಯ ಶಕ್ತಿಯಿದೆ. ಕೆಟ್ಟ ವಿಚಾರಗಳು ಬಂದಾಗಲೂ ಇಲ್ಲಿ ದೈವೀಪ್ರಜ್ಞೆ ಮಾಸುವುದಿಲ್ಲ. ಇದರಲ್ಲಿನ ಸತ್ಸಂಗತಿಗಳನ್ನು ನಿತ್ಯ-ಅಧ್ಯಯನ, ಚಿಂತನೆ ಮಾಡಬೇಕು.

ಇದರಲ್ಲಿ ದೇಹದ ಪಂಚೇಂದ್ರಿಯಕ್ಕೆ ಶಬ್ದ, ಸ್ಪರ್ಶ, ರೂಪ, ರಸ, ಗಂಧಾದಿಗಳೊಡನೆ, ಸಕಲೇಂದ್ರಿಯ ಕಾರ್ಯಕ್ಷೇತ್ರದ ಕೇಂದ್ರವಾದ ಮನಸ್ಸನ್ನು ರಂಜಿಸುವ ಮನೋರಂಜನೆಗೆ, ಜೀವಕ್ಕೂ, ಜೀವದ ಸ್ವಭಾವದಿಂದ ಜೀವನದ ಸ್ವಭಾವದಲ್ಲೂ - ಈ ಎರಡೂ ಘಟ್ಟಗಳಲ್ಲಿ ಶ್ರೀರಾಮಾಯಣವು ಕಾವ್ಯಕ್ರಿಯೆಯಾಗಿ ಪರಿಣಾಮವಾಗುವುದು. ಈ ರೀತಿಯಾಗಿ ಪರಿಣಾಮವಾಗುವುದೇ ಕಾವ್ಯಕ್ರಿಯೆ. ಅದೇ ಕಾವ್ಯದ ಸಹಜ ಗುಣ. ೧.ಮನೋರಂಜನೆ ೨. ಜೀವನೋತ್ಕರ್ಷ ಅರ್ಥಾತ್ ರಾಷ್ಟ್ರೋತ್ಕರ್ಷ, ಎಂದರೆ ದೇಶದ, ಸಮಾಜದ ಏಳ್ಗೆ. ದೇಶವೆಂದರೆ ಅಲ್ಲಿನ ಭೌತಿಕ ಸಂಪತ್ತಿಗಿಂತಲೂ ಮಹತ್ವವಾದದ್ದು ಅಲ್ಲಿ ವಾಸಿಸುವ ಜನರ ವ್ಯಕ್ತಿತ್ವ. ಅವರ ನಡವಳಿಕೆ, ಅವರ ಜೀವನ ಕ್ರಮ ಅಲ್ಲವೆ? ಮೊದಲನೆಯದರಲ್ಲಿ ಮುಗಿಯದೆ ಮುಂದುವರಿದು ಎರಡನೆಯದರಲ್ಲಿ ಎಷ್ಟು ಹೆಚ್ಚೆಚ್ಚು ತೊಡಗಿಸುವುದೋ ಅದೇ ಕಾವ್ಯದ ಮಹಾನತೆ. ಈ ನಿಜ ಸ್ವರೂಪದಲ್ಲಿ ನೆಲೆಗೊಳಿಸುವುದು ರಾಮಾಯಣ ಕಾವ್ಯ. ಕಾವ್ಯದ ಮುಖ್ಯ ಉದ್ದೇಶವೂ ಇದೇ ಅಲ್ಲವೇ? ಈ ನೈಜತೆಯಿಂದ ಶ್ರೇಷ್ಠವಾದದ್ದು ರಾಮಾಯಣ.

ದ್ರಷ್ಟಾರ ಕವಿ ವಾಲ್ಮೀಕಿಯು ಮನುಷ್ಯ ಸ್ವಭಾವದ ವೈಶಿಷ್ಟ್ಯ ವಿಚಿತ್ರಗಳನ್ನು ರಾಮಾಯಣದ ಪಾತ್ರಗಳಲ್ಲಿ ಸುಂದರವಾಗಿ, ಸುಮನೋಹರವಾಗಿ ಎಲ್ಲ ಓರೆ-ಕೋರೆಗಳನ್ನೂ ಕಿಂಚಿತ್ತೂ ಮರೆಮಾಚದೆ ಕಡೆದಿದ್ದಾರೆ. ನಾವು ಯಾವುದನ್ನು ನವೀನ ತಂತ್ರವೆನ್ನುತ್ತೇವೊ ಅದು ರಾಮಾಯಣದ ಪ್ರಾರಂಭದಲ್ಲಿದೆ. ಆಧುನಿಕ ತಂತ್ರವೆನ್ನುವುದೆಲ್ಲವೂ ರಾಮಾಯಣದ ನಕಲು. ಗೋಪ್ಯತೆ, ಹಿಂದೆ ಎಂದೋ ನಡೆದದ್ದನ್ನು ಸಂದರ್ಭಕ್ಕೆ ತಕ್ಕಂತೆ ಜೋಡಿಸುವುದು ಇತ್ಯಾದಿ ಎಲ್ಲವೂ ಇಂದಿನ ತಂತ್ರಜ್ಞತೆ ಎಂದು ನಾವು ತಿಳಿದಿದ್ದೇವೆ. ಆದರೆ ಇವೆಲ್ಲವೂ ರಾಮಾಯಣದಲ್ಲಿ ಪ್ರಾರಂಭದಿಂದ ಇವೆ. ತಮ್ಮ ತಂದೆಯ ಎದುರಿನಲ್ಲೇ ಲವ-ಕುಶರು ಹಾಡುತ್ತಿದ್ದಾರೆ, ಆದರೆ ತಂದೆಯೆಂದು ತಿಳಿದಿಲ್ಲ. ಶ್ರೀರಾಮನಿಗೆ ಹಾಡುತ್ತಿರುವವರು ತನ್ನ ಮಕ್ಕಳೆಂದು ತಿಳಿದಿಲ್ಲ. ೧೩ ವರ್ಷಗಳ ಹಿಂದೆ ಚಿತ್ರಕೂಟದಲ್ಲಿ ನಡೆದ ಕಾಕಾಸುರ ಘಟನೆಯನ್ನು ಸೀತೆ ಹನುಮಂತನಿಗೆ ಹೇಳುವುದರ ಮೂಲಕ ತೋರಿಸಿದ್ದಾರೆ. ಇಂತಹ ಅನೇಕ ಸಂದರ್ಭ-ಸನ್ನಿವೇಶಗಳು ರಾಮಾಯಣದಲ್ಲಿದ್ದು, ಅನೇಕ ಪಾತ್ರಗಳ ವೈಶಿಷ್ಟ್ಯಗಳಿಂದ ತುಂಬಿದೆ. 'ರಾಮೋ ವಿಗ್ರಹವಾನ್ ಧರ್ಮಃ' ಎಂದು ಹೇಳಿದ್ದು ಮಾರೀಚ. ಧರ್ಮ ಸಂರಕ್ಷಣೆಯ ಸಂಘರ್ಷದಲ್ಲಿ, ಸೀತಾಪಹರಣಕ್ಕೆ ಮೊದಲ ಆಘಾತ ಮತ್ತು ಬಲಿದಾನ ಪಕ್ಷಿ ಕುಲದ ಜಟಾಯುವಿನದ್ದು. ಶ್ರೀರಾಮನಿಗೆ ಧರ್ಮ ಸಂರಕ್ಷಣೆಯ ಕಾರ್ಯದಲ್ಲಿ ನೆರವಾದವರು ಕಪಿಗಳು, ಕರಡಿಗಳು. ಸೀತೆಗೆ ಅಶೋಕವನದಲ್ಲಿ ಸಾಂತ್ವನ ಹೇಳಿದ್ದು ತ್ರಿಜಟಾ ಎಂಬ ರಾಕ್ಷಸಿ, ವಿಭೀಷಣನ ಮಗಳು ಅನಲೆ ಹಾಗೂ ರಾವಣನ ಪತ್ನಿಯರು.

**ಸೀತೆಯ ಮಹಾನ್ ಚರಿತೆ:** ಶ್ರೀರಾಮಚಂದ್ರನ ಸಮಗ್ರ ವೃತ್ತಾಂತ, ಸೀತಾದೇವಿಯ ಮಹತ್ತ್ವಪೂರ್ಣವಾದ ನಡವಳಿಕೆ, ರಾವಣ ವಧೆಯ ವೃತ್ತಾಂತ – ಇವುಗಳಿಂದ ಕೂಡಿರುವ ರಾಮಾಯಣಕ್ಕೆ ವಾಲ್ಮೀಕಿ ಮಹರ್ಷಿಗಳು 'ಸೀತೆಯ ಚರಿತ್ರೆ' ಎಂದು ಹೆಸರಿಟ್ಟಿದ್ದಾರೆ.

**ಕಾವ್ಯಂ ರಾಮಾಯಣಂ ಕೃತ್ಸ್ನಂ ಸೀತಾಯಾಶ್ಚರಿತಂ ಮಹತ್।**
**ಪೌಲಸ್ತ್ಯವಧಮಿತ್ಯೇವ ಚಕಾರ ಚರಿತವ್ರತಃ ॥**

ಸೀತೆ ಇಲ್ಲಿ ಮಾತೆಯ ಪ್ರತೀಕವಾಗಿ ಮೇರುವಿನೋಪಾದಿಯಲ್ಲಿ ಮೆರೆದಿದ್ದಾಳೆ. 'ಮಾತೆ'ಯೆಂಬುದು ಸಮರ್ಪಣೆಯ, ಸೇವಾಭಾವನೆಯನ್ನು ಗುರುತಿಸುವ, ಗೌರವಿಸುವ ಪೂಜ್ಯ ಶಬ್ದ. ಈ ಭಾವ ಬರುವೆಡೆಯಲ್ಲಿ ಈ ಶಬ್ದವನ್ನು ಬಳಸುವುದು ನಮ್ಮ ಪುರಾತನ ಪದ್ಧತಿ. ಬಳಸುವ ನೀರು ಯಾವುದೇ ಇರಲಿ ಅದನ್ನು 'ಗಂಗಾ' ಎಂದು, ಹಸುವನ್ನು ಗೋಮಾತೆಯೆಂದು, ಭೂಮಿಯನ್ನು ಭೂಮಾತೆಯೆಂದು, ಗಾಯತ್ರಿಯನ್ನು ವೇದಮಾತೆಯೆಂದು, ಜ್ಞಾನದ ಬೆಳಕಾದ ಭಗವದ್ಗೀತೆಯನ್ನು ಗೀತಾಮಾತೆಯೆಂದು, ನಮ್ಮೆಲ್ಲರ ತಾಯಿ ಭಾರತಿಯನ್ನು ಭಾರತಮಾತೆ ಎಂದು ಕರೆಯುತ್ತೇವೆ. ಮಾತೃತ್ವದ ಮೂಲಗುಣ ಮಮತೆಯನ್ನು ಮೀರಿದ ಕರುಣೆ. ರಾಮಾಯಣದಲ್ಲಿ ನವರಸಗಳಿದ್ದರೂ ಕರುಣಾರಸವೇ ಪ್ರಧಾನ. ರಾಮಾಯಣದ ಪ್ರಾರಂಭಕ್ಕೆ ಕ್ರೌರ್ಯಕೃತ್ಯದ ಹಿನ್ನೆಲೆಯಲ್ಲಿ ಪ್ರಕಟಗೊಂಡ ಕರುಣಾರಸವೇ ಪ್ರಧಾನವಾಗಿದೆ. ಇಂದಿಗೂ ಹಲವಾರು ಮುಖವಾಡಗಳನ್ನು ಧರಿಸಿರುವ ಈ ಜಗತ್ತಿಗೆ, ಜಗತ್ತಿನ ಸೂತ್ರಧಾರನಾಗಿರುವ ಮನುಷ್ಯನಿಗೆ ಬೇಕಾಗಿರುವುದು ಕೊರತೆಯಾಗಿರುವ ಕಾರುಣ್ಯವೇ. ಹೀಗಾಗಿ ರಾಮಾಯಣವು ವಿಶ್ವಕ್ಕೇ ಮಹಾಮಾತೆಯಾಗಿದೆ.

ರಾಮಾಯಣದ ಭವ್ಯಭವನಕ್ಕೆ ಒಂದೊಂದು ಪಾತ್ರವೂ ತನ್ನದೇ ಕೊಡುಗೆಯನ್ನು ನೀಡಿದೆ. ಅದು ಯಾವುದೇ ರೂಪದಲ್ಲಿದ್ದರೂ ಪರಿಪೂರ್ಣವಾಗಿದೆ. ಅರಮನೆಯ ದಾಸಿಯರಿರಬಹುದು, ಅಂಗದೇಶದ ರಾಜ ರೋಮಪಾದನಿರಬಹುದು, ಅವನ ರಾಜ್ಯದ ವೇಶ್ಯೆಯರಿರಬಹುದು, ಹುಟ್ಟಿನಿಂದ ವಿಚಿತ್ರನಾದರೂ ಮಹಾತ್ಮನಾದ ಋಷ್ಯಶೃಂಗನಿರಬಹುದು, ಅಯೋಧ್ಯಾ ನಗರದ ಜನತೆಯಿರಬಹುದು. ಲಕ್ಷ್ಮಣ, ಭರತ, ಶತ್ರುಘ್ನ ಮೂವರೂ ರಾಮನ ಹೊರಗಿನ ಆತ್ಮದಂತೆಯೇ ತಮ್ಮ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಿದರು. ಲಕ್ಷ್ಮಣನು ರಾಮನಿಗೆ ಬೆಂಗಾವಲಾಗಿದ್ದನು. ಭರತನು ಧರ್ಮದ ಪ್ರತೀಕ. ರಾಮನೇ ಭರತನನ್ನು ಧರ್ಮಾತ್ಮನೆಂದು ಅನೇಕ ಸಂದರ್ಭಗಳಲ್ಲಿ ಕೊಂಡಾಡಿದ್ದಾನೆ. ವಸಿಷ್ಠರಿಗೂ ಧರ್ಮದ ಸ್ವರೂಪ ತಿಳಿಸಿದ ಹಿರಿಮೆಯ ಪುಕ್ಕ ಭರತನ ಕಿರೀಟದಲ್ಲಿದೆ. ಶತ್ರುಘ್ನನು ಹೊರನೋಟಕ್ಕೆ ದಾಸಾನುದಾಸನಾಗಿ ಕಂಡರೂ ಕರ್ತವ್ಯ, ಜವಾಬ್ದಾರಿಗಳ ನಿರ್ವಹಣೆಯಲ್ಲಿ ಸರ್ವಶ್ರೇಷ್ಠನು. ಪ್ರತ್ಯಕ್ಷ ರಾಜ್ಯ ನಿರ್ವಹಣೆಯಿಂದ ಮೂವರೂ ದೂರವಿದ್ದರೂ ಅದರ ನೊಗವನ್ನು ನೇರವಾಗಿ ಹೆಗಲಿಗೇರಿಸಿಕೊಂಡವನು ನಿತ್ಯ ಶತ್ರುದಮನನಾದ ಶತ್ರುಘ್ನ. ಇವರೆಲ್ಲರೂ ಧರ್ಮಾಂಶಸಂಭೂತರು. ಸತ್ಯ, ನಿಷ್ಠೆ, ನಿಸ್ವಾರ್ಥತೆ, ತ್ಯಾಗ, ಪರಾಕ್ರಮಗಳಲ್ಲಿ ಶ್ರೀರಾಮನಿಗೆ ಮಾತ್ರ ಎರಡನೆಯವರು. ಕೆಲವೊಮ್ಮೆ ಅವರು ತೋರುವ ಕೋಪಕ್ಕೆ ಶ್ರೀರಾಮ-ನಿಷ್ಠ ಧರ್ಮವೇ ಮೂಲ. ಶತ್ರುಘ್ನ, ಭರತ, ಮಂಥರೆ, ಕೈಕೇಯಿ ಬಗ್ಗೆ ಅವರು ನಡೆದುಕೊಂಡಲ್ಲಿ , ಕಾಡಿಗೆ ಹೊರಟ ಸಂದರ್ಭದಲ್ಲಿ, ಲಕ್ಷ್ಮಣ ದಶರಥನ ಬಗ್ಗೆ ಮಾತನಾಡಿದಾಗ – ಇವೇ ಮುಂತಾದ ಸಂದರ್ಭಗಳಲ್ಲಿ ಇದು ವ್ಯಕ್ತವಾಗಿದೆ.

ಒಂದೇ ಅರಮನೆಯ ಅಂತಃಪುರದಲ್ಲಿದ್ದವರ ಸ್ವಭಾವಗಳು ಭಿನ್ನ-ಭಿನ್ನ. ಪರಮ ಧಾರ್ಮಿಕ ಸ್ವಭಾವದ ಕೌಸಲ್ಯೆ. ವ್ಯಾಮೋಹ, ಮಾತ್ಸರ್ಯದ ಪ್ರತೀಕ ಮಂಥರೆ, ಕೈಕೇಯಿ. ಭೋಗದ ಕೆಸರಿನಲ್ಲಿ ಅರಳಿದ ತ್ಯಾಗದ ಕಮಲ ಯೋಗಿನಿ ಸುಮಿತ್ರೆ. ತನ್ನ ಇಬ್ಬರು ಮಕ್ಕಳನ್ನೂ ಸ್ವಾಮಿಕಾರ್ಯಕ್ಕೆ ಮತ್ತು ಪ್ರಜಾಹಿತಕ್ಕೆ ವಿನಿಯೋಗಿಸಿದಳು. ಅದೇ ಕೈಕೇಯಿ? ಅದೇ ಕೈಕೇಯಿಯ ಮಗ ಭರತ? ಸುಮಿತ್ರೆಯ ಬಾಯಲ್ಲಿ ಬಂದ ಮಾತುಗಳು; ''ಲಕ್ಷ್ಮಣ, ಇನ್ನು ಮುಂದೆ ನಿನಗೆ ರಾಮನೇ ತಂದೆ, ಸೀತೆಯೇ ತಾಯಿ. ಅರಣ್ಯವೇ ಅಯೋಧ್ಯೆ. ಸುಖವಾಗಿ ಹೋಗಿ ಬಾ.'' ಬೇಡರ ಜಾತಿಯ ಗುಹ ಶ್ರೀರಾಮನಿಗೆ ಆತ್ಮಮಿತ್ರ, ಮೈತ್ರಿಯ ಮೂರ್ತಿ; ಕೈಕೇಯಿ ಶ್ರೀರಾಮನಿಂದ ಕಿತ್ತುಕೊಂಡರೆ, ಗುಹ ತನ್ನದೆಲ್ಲವನ್ನೂ ಸಮರ್ಪಿಸಲು ಹಿಂದು ನೋಡದೆ ಮುಂದಾದ. ಗುರುಭಕ್ತಿಯ ದಾಸಾನುದಾಸಳಾದ ಶಬರಿ, ಆತ್ಮಸಂಪತ್ತಿನ ಧರ್ಮಜ್ಞೆ, ನಿಪುಣೆ. ಸದಾಚಾರ-ಸದ್ಗುಣಗಳು ಓದು, ಬರಹ ಬಲ್ಲವರ ಏಕಸ್ವಾಮ್ಯವೆಂದು ತಿಳಿದಿರುವ ತಪ್ಪು ಗ್ರಹಿಕೆಯಿರುವವರ ಕಣ್ತೆರೆಸುವ ಚಿನ್ಮಯಮೂರ್ತಿ ಆಕೆ. ರಾಮನ ಬಾಲ್ಯವನ್ನು ರೂಪಿಸಿದವರು ವಿಶ್ವಾಮಿತ್ರರು, ಕುಲಗುರುಗಳಾದ ವಸಿಷ್ಠರು. ತಿರ್ಯಕ್ ಪ್ರಾಣಿಗಳಾದ ಜಟಾಯು-ಸಂಪಾತಿ, ಇವರ ಜೀವನದ ಉದ್ದೇಶ ಸಾಧಿತವಾಯಿತು. ಸಂಪೂರ್ಣ ಶಕ್ತಿಯನ್ನು ಸುರಿದು ಕೆಲಸ ಮಾಡುವ ಅಳಿಲಿನ ಸೇವೆಯ ಸಂದೇಶ. ಸೀತಾರಾಮರಿಬ್ಬರಿಂದಲೂ ಅದ್ವಿತೀಯನೆಂಬ ಪ್ರಮಾಣಪತ್ರ ಪಡೆದ ಹನುಮಂತ. ಸರ್ವೋತ್ತಮ ಸಮರ್ಪಿತ ಸೇವಾ ಕಾರ್ಯಕರ್ತ, ಶ್ರೇಷ್ಠ ಕಾರ್ಯನಿರ್ವಾಹಕ, ಸಂದೇಶವಾಹಕ, ಸಂಪರ್ಕನಿಪುಣ. ಸಂಸ್ಕಾರ, ಸನ್ನಿಕರ್ಷ ಹಾಗೂ ಉತ್ತಮ ಚಿಂತನೆಗಳಿಂದ ಗುಣಭೇದಗಳೆಂಬುದು ಹಲವು ಪಾತ್ರಗಳಲ್ಲಿ ಕಂಡು ಬರುತ್ತವೆ. ರಾವಣ, ಕುಂಭಕರ್ಣ, ವಿಭೀಷಣ, ಸುಗ್ರೀವ ಇತ್ಯಾದಿ ಪಾತ್ರಗಳು. ತ್ರಿಜಟಾ ಎಂಬ ರಾಕ್ಷಸರ ನಡುವಿನ ಅಮೃತ ಬಳ್ಳಿ – ಹೀಗೆ ಮನುಜ ಸ್ವಭಾವದ ನೂರಾರು ಮುಖಗಳನ್ನು ಹಲವಾರು ಪಾತ್ರಗಳಲ್ಲಿ ದರ್ಶನ ಮಾಡಿಸಿದ್ದಾರೆ ವಾಲ್ಮೀಕಿ ಮಹರ್ಷಿ.

ರಾಮಾಯಣದಲ್ಲಿನ ಪಾತ್ರ ಸನ್ನಿವೇಶಗಳಿಂದಲೇ ನೀತಿ-ಮೌಲ್ಯ ಹಾಗೂ ಸದ್ಗುಣಗಳ ಪ್ರಭಾವ ಸ್ವಾಭಾವಿಕವಾಗಿ ಆಗುವುದು ಈ ಮಹಾಕಾವ್ಯದ ವಿಶೇಷತೆಯಾಗಿದೆ. ಎಲ್ಲಿಯೂ ಹೀಗೆಯೇ ಮಾಡಿ ಎಂದು ಪ್ರತ್ಯಕ್ಷ ಬೋಧನೆ-ನಿರ್ದೇಶನಗಳಿಲ್ಲ. ನೀತಿಶಾಸ್ತ್ರದಂತೆ ಅಪ್ರತ್ಯಕ್ಷ ಹೃದಯಾನುಭವದಿಂದ ಪ್ರಭಾವಿತರನ್ನಾಗಿ ಮಾಡುವುದೇ ರಾಮಾಯಣದ ಕೊಡುಗೆಯಾಗಿದೆ. ಮನೋಹರವಾದ ಕಥೆ-ಪ್ರಸಂಗಗಳಿಂದ (ಶುನಃಶೇಫ, ತ್ರಿಶಂಕು, ವಿಶ್ವಾಮಿತ್ರ) ನಮ್ಮ ಅಂತರಂಗದಲ್ಲಿಯೇ ಸಂವೇದನಾಶೀಲ ಅನುಭವವಾಗುವುದು. ನಮ್ಮಿಂದ ನಾವೇ ನಮಗರಿವಿಲ್ಲದಂತೆ ಸದಸದ್ವಿವೇಕ ಮಾಡಿಕೊಳ್ಳುವಂತೆ ಮಾಡುವುದು. ಇದರಲ್ಲಿ ಎಲ್ಲಿಯೂ ರಾಮನನ್ನು ಪೂಜಿಸಿ, ಸೀತೆಯನ್ನು ಸೇವಿಸಿ, ಲಕ್ಷ್ಮಣನನ್ನು ಅನುಸರಿಸಿ, ಹನುಮಂತನನ್ನು ಅವಲಂಬಿಸಿ ಎಂದು ವಾಲ್ಮೀಕಿಗಳು ಹೇಳಿಲ್ಲ. ಅಂತಃಕರಣದ ಸ್ವಯಂ ಪ್ರವರ್ತಿತ

ಪ್ರವಾಹದಿಂದ ನಮಗರಿವಿಲ್ಲದಂತೆ ಅದು (ಅನುಕರಣೆ ಮಾಡುವುದು) ತಿಳಿಯುವುದು. ವೇದಗಳಲ್ಲಿ ಆಜ್ಞೆಯಿದೆ. ಸತ್ಯಂ ವದ, ಧರ್ಮಂ ಚರ ಇತ್ಯಾದಿ. ಇದು ಪ್ರಭು ಸಮ್ಮಿತೆ. ರಾಮಾಯಣವು ಮಿತ್ರಸಮ್ಮಿತೆಯೂ ಆಗಿರದೆ ಕಾಂತಾಸಮ್ಮಿತೆಯಾಗಿದೆ. ಕುಶಲ ಪತ್ನಿ ತನ್ನ ಪತಿಗೆ ತಿಳಿಯಹೇಳಿದಂತೆ. **'ರಾಮಾದಿವತ್ ವರ್ತಿತವ್ಯಮ್ ನ ರಾವಣಾದಿವತ್'.**

ರಾಮನ ನಡೆ, ಸತ್ಯ ಶ್ರದ್ಧೆ ಎಷ್ಟು ಚೆನ್ನ? ಸೀತೆಯ ಪತಿನಿಷ್ಠೆ ಎಷ್ಟು ಕಠೋರ? ಜಟಾಯುವಿನ ಧರ್ಮನಿಷ್ಠ ಹೋರಾಟ ಅಲ್ಲ ಮಹಾ ಸಂಗ್ರಾಮ, ಶ್ರೀರಾಮನ ಕುದುರೆಯ ಪ್ರೀತಿ, ಗುಹನ ಬಂಧುತ್ವ, ಶಬರಿಯ ಭಕ್ತಿ, ಸುಮಿತ್ರೆಯ ದೃಢತೆ ಮೊದಲಾಗಿ ಇಂದ್ರಿಯ ಭೋಗದೊಡನೆ ತ್ಯಾಗಯುಕ್ತ ಆತ್ಮಯೋಗ ಎರಡೂ ಇದೆ. ಮನೆಗೆ ಬಂದ ಅತಿಥಿಗೆ ಕುಲಸ್ತ್ರೀ ಆತಿಥ್ಯ ನೀಡಿದಂತೆ. ಬಂದವರಿಗೆ ಭೋಜನ, ಹೊತ್ತು ತಂದ ಕುದುರೆಗೆ ಹುರುಳಿ ಹಾಕಿದಂತೆ. ಜೀವನವೆಂದರೆ ಯಾವುದೋ ಒಂದಲ್ಲ, ಎಲ್ಲವೂ ಸಮ (ಹೊಂದಿಕೊಳ್ಳುವ) ಪ್ರಮಾಣದಲ್ಲಿರಬೇಕು. ಎಲ್ಲವೂ ಸೇರಿರುವುದು ಜೀವನ. ಅದು ಹೇಗೆ? ಸರಿಯಾಗಿ ಹೊಂದಿಕೊಳ್ಳುವ ಪ್ರಮಾಣದಲ್ಲಿ ರುಚಿಯಾದ ಅಡುಗೆಯನ್ನು ಸಿದ್ಧಪಡಿಸಿ ರಸದೌತಣವನ್ನು ವಾಲ್ಮೀಕಿ ಮಹರ್ಷಿಗಳು ಬಡಿಸಿದ್ದಾರೆ.

ಚಿತ್ರಕೂಟದಲ್ಲಿ ಶ್ರೀರಾಮನನ್ನು ಅಯೋಧ್ಯೆಗೆ ಕರೆತರಬೇಕೆಂದು ತೀರ್ಮಾನಿಸಿದ ಭರತ ಜನತೆಯನ್ನು ಒತ್ತಾಯಿಸಿದ. ಅಲ್ಲಿದ್ದ ಜನಸ್ತೋಮಕ್ಕೂ ವಿಚಿತ್ರ ಅನುಭವ. ರಾಮ ಮತ್ತು ಭರತರ ಸಂವಾದ ಕೇಳಿ ರಾಮನ ಮಾತು ಸರಿಯೋ? ಭರತನು ಸರಿಯೋ? ಎಂದು ತಿಳಿಯದೆ ಗೊಂದಲದಲ್ಲಿ ಬಿದ್ದರು. ಅವರೆಲ್ಲರೂ ರಾಮನು ಕಾಡನ್ನು ತ್ಯಜಿಸಿ ನಾಡಿಗೆ ಬರಲೇಬೇಕೆಂದು ಸಂಕಲ್ಪಿಸಿ ಬಂದಿದ್ದವರು. ಆ ಸನ್ನಿವೇಶವನ್ನು ಬಳಸಿಕೊಂಡಾದರೂ ರಾಮನನ್ನು ಅಯೋಧ್ಯೆಗೆ ಕರೆದುಕೊಂಡು ಹೋಗಬೇಕೆಂದು, ''ನೀವೇಕೆ ಸುಮ್ಮನಿದ್ದೀರಿ? ನೀವೇಕೆ ಕಾಡಿಗೆ ಬಂದಿರುವುದು? ರಾಮನನ್ನು ಕಂಡೊಡನೆ ಎಲ್ಲವನ್ನೂ ಮರೆತಿರಾ? ರಾಮನನ್ನು ಹಿಂತಿರುಗಲು ಒತ್ತಾಯಿಸಿರಿ. ಅಣ್ಣ ಅಯೋಧ್ಯೆಗೆ ಬರಲೇಬೇಕೆಂದು ಒತ್ತಡ ಹೇರಿರಿ. ಮತ್ತೆ ರಾಮ ನಮಗೆ ಸಿಗಲಾರ, ನಾವೂ ಬರಲಾರೆವು'' ಎಂದು ಇತ್ಯಾದಿಯಾಗಿ ಅವಸರಪಡಿಸಿದನು.

ಆಗ ಜನ ಮಾನಸದಲ್ಲಿ ಭರತನ ಹೊಸ ವಿಚಾರದ ಅಲೆಯೆದ್ದಿತು. ಚಿಂತನೆಯ ಮಂಥನವಾಗಲು ಪ್ರಾರಂಭವಾಯಿತು. ಆಗ ರಾಮನಿಗೂ ಚಿಂತೆಯಾಯಿತು. ಅದುವರೆಗೂ ತಮ್ಮನನ್ನು ಸಂತೈಸುತ್ತಿದ್ದ. ಭರತನ ನಿಲುವೇ ಅವನಿಗೆ ಅಚ್ಚರಿಯಾಗಿತ್ತು. ಆದರೆ ಅವನು ಮಾತನಾಡಿದ ವಿಚಾರ ಜನತೆಯ ತೀರ್ಪನ್ನು ಬೇಡಿತ್ತು. ಭರತನು ಶಬ್ದಗಳಿಂದ ಜನತೆಯೊಡನೆ ಮಾತನಾಡಿದ್ದ. ರಾಮನು ಆ ವಿಶಾಲ ಜನಸಮೂಹದೊಡನೆ ಮಾತನಾಡಿದ್ದ, ಆದರೆ ಶಬ್ದಗಳಿಂದಲ್ಲ, ತನ್ನ ಮಧುರ ಮನದ, ಹೃದಯದ ಭಾವನೆಗಳಿಂದ. ಭರತನ ಮಾತುಗಳು ಜನತೆಯ ಬುದ್ಧಿಗೆ ಪ್ರಚೋದಕವಾಗಿತ್ತು. ರಾಮನ ಹೃನ್ಮನದ ಭಾವ ಜನತೆಯ ಹೃದಯಕ್ಕೆ ರೋಚಕವಾಗಿತ್ತು. ರಾಮನು ಆ ಸಮಯದಲ್ಲಿ ಧರ್ಮದೇವತೆಯಲ್ಲಿ ಪ್ರಾರ್ಥಿಸಿದ. ಪ್ರಾರ್ಥನೆಯ ಒಕ್ಕಣೆ ಹೀಗಿತ್ತು; ''ಜನತೆ ನೀಡುವ ತೀರ್ಪು ನನ್ನ ಪರವಾಗಿರುವುದು ಬೇಡ. ಸತ್ಯ, ನ್ಯಾಯ, ಧರ್ಮಗಳ ಪರವಾಗಿರಲಿ'' ಎಂದು. ರಾಮ, ಭರತರ ಇಬ್ಬರ ಮನಸ್ಸೂ ಅವರ್ಣನೀಯ ಸ್ಥಿತಿಯಲ್ಲಿತ್ತು. ಭರತನೂ ಬಳಲಿದ್ದ. ಅದನ್ನು ಕಂಡ ರಾಮ ಬಸವಳಿದಿದ್ದ. ವಸಿಷ್ಠ, ಕೌಸಲ್ಯೆ, ಸುಮಿತ್ರೆ, ಕೈಕೇಯಿ ಹಾಗೂ ಉಳಿದ ಅರಮನೆಯ ವರ್ಗದವರಿಗೂ ಕಸಿವಿಸಿಯಾಯಿತು. ರಾಮನೇನಾದರೂ ಹೇಳಬಹುದೆಂದು ಎಲ್ಲರೂ ಕಾದಿದ್ದರು. ಆದರೆ ಭರತನು ರಾಮನಿಗೆ ನಿರ್ಣಯವನ್ನು ತೆಗೆದುಕೊಳ್ಳಲು ಅವಕಾಶ ಕೊಟ್ಟಿರಲಿಲ್ಲ. ಭರತನು ಹೀಗೆ ಮಾಡಿದನೆಂದು ರಾಮನೂ ಸಿಟ್ಟಾಗಲಿಲ್ಲ. ತಮ್ಮನ ನಿಲುವನ್ನೇ ಅನುಮೋದಿಸಿದ್ದಾನೆ. ಜನತೆಯ ಆದೇಶಕ್ಕೆ ಬದ್ಧನಾಗಿ ಕಾಯುತ್ತಿದ್ದಾನೆ. ಇದೇ ಉತ್ತಮ ಪುರುಷನ ಮರ್ಯಾದೆಯ ನಿಲುವು, ನಡವಳಿಕೆ.

ಫಲಿಸಿದ ಪ್ರಾರ್ಥನೆ – ಬಂಗಾರದ ಜನಾದೇಶದ ನಿವೇದನೆ: ಭರತನ ಮಾತುಗಳನ್ನು ಕೇಳಿ ಅನೇಕರು ತಮ್ಮ ಬುದ್ಧಿ ಚಾತುರ್ಯಗಳನ್ನು ತೋರಿದರು. ಮತ್ತೂ ಅನೇಕರು ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. ಎಲ್ಲರೂ ಎಲ್ಲ ವಿಚಾರಗಳ ಪೂರ್ವಾಪರ ಚಿಂತನೆ ಮಾಡಿದರು. ಸದಸದ್ವಿವೇಕದಿಂದ ಕೊನೆಗೆ ಎಲ್ಲರೂ ಸೇರಿ ಒಮ್ಮತದ ನಿರ್ಣಯಕ್ಕೆ ಬಂದರು. ಜಗತ್ತಿನ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಕೆತ್ತಿಡಬೇಕಾದ ಜನಾದೇಶ ಘೋಷಣೆ ಮಾಡಿದರು.

**ಕಾಕುತ್ಸ್ಥಮಭಿಜಾನೀಮಃ ಸಮ್ಯಗ್ವದತಿ ರಾಘವಃ ।**
**ಏಷೋಽಪಿ ಹಿ ಮಹಾಭಾಗಃ ಪಿತುರ್ವಚಸಿ ತಿಷ್ಠತಿ ॥**
**ಅತ ಏವ ನ ಶಕ್ತಾಃ ಸ್ಮೋ ವ್ಯಾವರ್ತಯಿತುಮಂಜಸಾ ॥**

''ರಾಜಕುಮಾರ ಭರತ, ನಾವು ರಾಮನನ್ನು ಚೆನ್ನಾಗಿ ಬಲ್ಲೆವು. ರಘುವಂಶೋತ್ಪನ್ನನಾದ ರಾಘವನು ಹೇಳುವುದೇ ಯುಕ್ತವಾಗಿದೆ. ಈ ಮಹಾತ್ಮ ರಾಮನಂತೂ ತಂದೆಯ ಮಾತುಗಳ ಪಾಲನೆಯಲ್ಲಿಯೇ ದೃಢನಿಷ್ಠನಾಗಿದ್ದಾನೆ. ಅದು ಕೂಡ ಸರಿಯಾದದ್ದೇ ಆಗಿದೆ. ಆದ್ದರಿಂದ ಇವನನ್ನು ಹಿಂತಿರುಗಿಸಲು ನಾವು ಅಶಕ್ತರು'' ಎಂದರು. ಯಾವ ಜನತೆ, ರಾಜ ಸಮೂಹ, ಮಂತ್ರಿಗಳ ಸಂಪುಟವು ರಾಮನೇ ರಾಜನಾಗಬೇಕೆಂದು ಒಮ್ಮತದ ಬೆಂಬಲ ಕೊಟ್ಟಿತ್ತೋ, ಯಾವ ಜನತೆ ರಾಮ ಕಾಡಿಗೆ ಹೊರಟಾಗ ಅವನನ್ನು ಹಿಂಬಾಲಿಸಿ, ಮನವೊಲಿಸುವಲ್ಲಿ ಸೋತು ಹಿಂತಿರುಗಿತ್ತೋ, ಯಾವ ಜನತೆ ರಾಮನಿಗೆ ರಾಜನಾಗುವ ಅವಕಾಶ ತಪ್ಪಿದಾಗ ದಶರಥ, ಕೈಕೇಯರಿಗೆ ಛೀಮಾರಿ ಹಾಕಿತ್ತೋ, ಯಾವ ಜನತೆ ರಾಮನೇ ರಾಜನಾಗಬೇಕೆಂದು, ರಾಮನನ್ನು ಕಾಡಿನಿಂದ ಅಯೋಧ್ಯೆಗೆ ಹಿಂತಿರುಗಿಸಲು ಭರತನೊಡನೆ ಟೊಂಕ ಕಟ್ಟಿತ್ತೊ, ಅದೇ ಜನತೆ ಮೇಲಿನ ತೀರ್ಪು ಕೊಟ್ಟಿತ್ತು. ಜನತಾ ಜನಾರ್ದನನು ಪ್ರಸಾದಿಸಿದ್ದ ಜನಾದೇಶದ ನ್ಯಾಯಪುಷ್ಪ ರಾಮನ ಮಡಿಲು ಸೇರಿತ್ತು. ರಾಮನು ಕೇವಲ ಪರಾಕ್ರಮಿಯಾಗಿರಲಿಲ್ಲ, ಸತ್ಯ ಪರಾಕ್ರಮಿಯಾಗಿದ್ದ. ಅದೇ ಜನಸಾಗರ, ರಾಮ ಕಾಡಿಗೆ ಹೋಗುವುದೇ ಸರಿಯೆಂದು ತೀರ್ಮಾನಿಸಿತ್ತು. ನೀಡಿದ ಆದೇಶದಲ್ಲಿ ಭರತನೇ ಅಯೋಧ್ಯೆಗೆ ಹಿಂತಿರುಗಬೇಕೆಂಬ ಒತ್ತನ್ನು ಕೊಟ್ಟಿತ್ತು. ಜನತಾ ನ್ಯಾಯಾಲಯದಲ್ಲಿ ರಾಮ, ಭರತರೇ ವಾದಿ, ಪ್ರತಿವಾದಿಗಳಾಗಿದ್ದರು. ಅಂದಿನ ಸತ್ಯದ ವಿಜಯ ರಾಮನ ಪಾಲಿಗೇ ಆಗಿತ್ತು. ಆದರೆ ಭರತನೂ ಪರಾಭವಗೊಂಡಿರಲಿಲ್ಲ. ಕಾರಣವೆಂದರೆ, ರಾಮ ತನ್ನ ಕೊರಳಿಗೆ ವಿಜಯಮಾಲೆ ಬೀಳುವಾಗ ಭರತನನ್ನು ಅಪ್ಪಿಕೊಂಡಿದ್ದ.

**ರಾಷ್ಟ್ರಪುರುಷ ರಾಮ:** ಇಂದಿಗೆ ನಿರ್ಣಯಿಸಲಾಗದ ಕಾಲ ಮಾನದ ಹೊರಗೆ ಇದ್ದ ವಂಶಪಾರಂಪರ್ಯದ ಪ್ರಜಾಪಾಲನೆಯಲ್ಲಿನ ಪ್ರಜಾಪ್ರಭುತ್ವದ ಮಾದರಿ ಇದಾಗಿತ್ತು. ಅಂದಿನ ಆಯ್ಕೆಯಲ್ಲಿ ಸ್ಪರ್ಧಿಗಳಾಗಿದ್ದವರು ಇಬ್ಬರು, ಅವರೇ ರಾಮ, ಭರತ. ಸ್ಪರ್ಧೆ ಗದ್ದುಗೆಗಾಗಿ ಇರಲಿಲ್ಲ. ಆದರೆ ಗದ್ದುಗೆಯ ತ್ಯಾಗಕ್ಕಾಗಿ ಇತ್ತು. ಮನಸ್ಸಿನ ತಾಪವಲ್ಲ ಸಂತಾಪ ಅಧಿಕಾರಕ್ಕಾಗಿ ಇರಲಿಲ್ಲ. ಅಧಿಕಾರದ ತೊರೆಯುವಿಕೆಗಾಗಿ ಇತ್ತು. ಅಸೂಯೆಯಿಂದ ನಡೆದ ಪಂದ್ಯವಾಗಿರದೆ, ಅನಸೂಯಕತನದೊಡನೆ ನಡೆದ, ನೋಡಿ ಆನಂದಿಸುವಂತಹ ಆದರ್ಶ ಭ್ರಾತೃಮಿಲನವಾಗಿತ್ತು. ಎಲ್ಲರಿಂದಲೂ ವಂದನೀಯವಾಗಿತ್ತು. ಅಂದಿನ ಜನಾದೇಶ ನೀಡಲು ಜನತೆಯೇ ವಿಜಯಿಯ ಸ್ಥಾನವನ್ನು ಹುಡುಕಿಕೊಂಡು ಬಂದಿತ್ತು. ಅದಕ್ಕಾಗಿ ನೂರಾರು ಮೈಲಿಗಳ ದೂರ ಕಾಡು-ಮೇಡುಗಳನ್ನು ದಾಟಿ, ಕಲ್ಲು, ಮುಳ್ಳುಗಳನ್ನು ತುಳಿದು ಧಾವಿಸಿತ್ತು. ಅದೂ ಬರುವಾಗ ಭರತನ ಪರವಾಗಿತ್ತು. ಚಿತ್ರಕೂಟದಲ್ಲಿ ಧರ್ಮದ ಪರವಾಯಿತಷ್ಟೇ ಅಲ್ಲ, ಭರತನನ್ನೂ ಧರ್ಮಕ್ಕೆ ಬದ್ಧನನ್ನಾಗಿ ಮಾಡಿತ್ತು. ರಾಮನು ತಾನು ಧರ್ಮ ಬದ್ಧನಾಗುವುದರ ಮೂಲಕ ಜನ ಸಾಗರವನ್ನೂ ಧರ್ಮದ ದಂಡೆಯಲ್ಲಿ ಬಂಧಿಸಿದ್ದ. ರಾಮನ ಧರ್ಮಯುಕ್ತ, ಸತ್ಯನಿಷ್ಠ ವ್ಯಕ್ತಿತ್ವ ಈ ರೀತಿ ಜನ ಮಾನಸದಲ್ಲಿ ಬೇರೂರಿತ್ತು. ಆಗ ರಾಮನಿನ್ನೂ ರಾಜನಾಗಿರಲಿಲ್ಲ. ಕೇವಲ ೨೭ ವರ್ಷದವನಾಗಿದ್ದ. ಯಾವುದೇ ಸಣ್ಣ ಅಧಿಕಾರವೂ ಇಲ್ಲದೆ ರಾಷ್ಟ್ರ ಪುರುಷನಾಗಿದ್ದ. ಇದಕ್ಕೆ ರಾಮ ಕಾಡಿಗೆ ಹೊರಟಾಗ ವಸಿಷ್ಠರು ನುಡಿಯುವುದೇ ಸಾಕ್ಷಿಯಾಗಿದೆ.

ನ ಹಿ ತದ್ಭವಿತಾ ರಾಷ್ಟ್ರಂ ಯತ್ರ ರಾಮೋ ನ ಭೂಪತಿಃ ।
ತದ್ವನಂ ಭವಿತಾ ರಾಷ್ಟ್ರಂ ಯತ್ರ ರಾಮೋ ನಿವತ್ಸ್ಯತಿ ॥

'ರಾಮನು ಅಯೋಧ್ಯೆಗೆ ಅಧಿಪತಿಯಾಗದಿದ್ದರೆ ಇದೊಂದು ರಾಷ್ಟ್ರವಾಗಿ ಉಳಿಯುವುದೇ ಇಲ್ಲ. ರಾಮನು ಅರಣ್ಯದಲ್ಲಿದ್ದರೆ ಅರಣ್ಯವೇ ಒಂದು ರಾಷ್ಟ್ರವಾಗುವುದು.'

ಹೀಗೆ ರಾಮನು ದೇಶದ ಜನಮಾನಸದ ಸಿಂಹಾಸನದಲ್ಲಿ ಪಟ್ಟಾಭಿಷಿಕ್ತನಾಗಿದ್ದನು. ಅದರ ಪ್ರಭಾವದ ಪ್ರತೀಕವಾಗಿ ಪ್ರಕಟಗೊಂಡ ಪ್ರಜಾನಿರ್ಣಯಕ್ಕೆ ಭರತನೂ ತಲೆದೂಗಿದ್ದ. ತಾನೂ ಅಂತೆಯೇ ನಡೆದಿದ್ದನು. ತನ್ನ ಹೃದಯ ಸಿಂಹಾಸನದಲ್ಲಿ ರಾಮನಿರುವುದರ ಸಂಕೇತವಾಗಿ ಪಾದುಕೆಗಳಿಗೇ ಪಟ್ಟಾಭಿಷೇಕ ಮಾಡಿದ್ದನು. ಪ್ರಜೆಗಳೂ, ಅಧಿಕಾರಿಗಳೂ, ಮಂತ್ರಿಗಳೂ ಎಲ್ಲರೂ ಭರತನಿಗೆ ಪೂರ್ಣವಾಗಿ ಧರ್ಮಯುಕ್ತ ಸಹಕಾರ ನೀಡಿದ್ದರು. ರಾಮನು ತಾನೊಬ್ಬ ಮಾತ್ರ ಧರ್ಮಾತ್ಮನಾಗಿರಲಿಲ್ಲ, ತನ್ಮೂಲಕವಾಗಿ ಸಂಪೂರ್ಣ ಸಮಾಜ ಧರ್ಮಯುಕ್ತವಾಗಿ ನಡೆಯುವಂತೆ ತನ್ನ ನುಡಿಯಿಂದ ಮಾತ್ರವಲ್ಲ, ನಡೆಯಿಂದಲೂ ಪ್ರಯತ್ನ ಮಾಡಿದ್ದನು. ಇದನ್ನೇ ಕೌಸಲ್ಯೆ ರಾಮ ಅರಣ್ಯಕ್ಕೆ ಹೊರಡುವಾಗ ಹೇಳಿದ್ದಳು: ''ಸಮಸ್ತ ಲೋಕಗಳೂ ಒಟ್ಟಾಗಿ ಧುಮುಕಿದರೂ ರಾಮನಿಗೆ ಭಯವಿಲ್ಲ. ಅಧರ್ಮಕ್ಕಿಳಿಯುವ ಈ ಲೋಕವನ್ನೂ ಅವನು (ಆ ಧರ್ಮಾತ್ಮನು) ಧರ್ಮಮಾರ್ಗದಲ್ಲಿ ನಡೆಯುವಂತೆ ನಿಯಮಿಸಬಲ್ಲನು.''

ಅಂದಿನ ಜನತಂತ್ರದ ನಿರ್ಣಯಕ್ಕೆ, ಉತ್ತಮ ಪ್ರಜಾಡಳಿತಕ್ಕೆ, ಜನಾದೇಶಕ್ಕೆ ಬೆಂಬಲವಾಗಿದ್ದುದು ಸಂವಿಧಾನವಲ್ಲ, ಕಾನೂನು-ಕಟ್ಟಳೆ ಹಾಗೂ ಪರಂಪರೆಯ ಆಚರಣೆಯ ರೀತಿ-ನೀತಿಗಳಲ್ಲ. ಇಂದಿನ ತಥಾಕಥಿತ ೫೧% - ೪೯% ಬಹುಮತ ಪದ್ಧತಿ ಅಂದು ಇರಲೇ ಇಲ್ಲ. ಇವೆಲ್ಲಕ್ಕಿಂತ ಮಿಗಿಲಾಗಿ ರಾಜನಾಗಬೇಕಾಗಿದ್ದ ವ್ಯಕ್ತಿಯ ಹಾಗೂ ಆ ಕುಟುಂಬದ ವ್ಯಕ್ತಿಗಳ ಆಚರಣೆ ಮುಖ್ಯವಾಗಿತ್ತು. ರಾಷ್ಟ್ರನಿರ್ಮಾಪಕರು ಸ್ವತಃ ತ್ಯಾಗಿಗಳಾಗಿದ್ದಲ್ಲಿ ಮಾತ್ರ ಈ ರೀತಿಯ ಕಾರ್ಯಸಾಧನೆ ಮಾಡಿ ಜನತೆಯಲ್ಲಿ ಸತ್ಯ ಹಾಗೂ ಧರ್ಮದ ಸಾತ್ವಿಕ ಪ್ರಭಾವ ಮೂಡಿಸಬಲ್ಲರು. ಭಾರತೀಯ ಸಂಸ್ಕೃತಿಯ ಪೋಷಣೆಯನ್ನು ರಾಮಾಯಣ ಬಹಳವಾಗಿ ಮಾಡಿದೆ. ನಮ್ಮ ಭಾಷೆ, ರೀತಿ, ನೀತಿಗಳು, ಪದ್ಧತಿಗಳು, ಉಡುಗೆ-ತೊಡುಗೆ, ಆಹಾರ, ವಿಹಾರಗಳು ಭಿನ್ನ, ವೈವಿಧ್ಯತೆಗಳಿಂದ ಕೂಡಿದ್ದರೂ ನಮ್ಮೆಲ್ಲರ ಸ್ಫೂರ್ತಿಯ ಏಕಾತ್ಮತೆಯ ಕೇಂದ್ರದ ಪ್ರಧಾನ ಆಕರ್ಷಣೆ ರಾಮ, ಸೀತೆಯ ಚರಿತೆ ಹಾಗೂ ರಾಮಾಯಣದ ಪಾತ್ರಗಳು. ಹೀಗಾಗಿ ರಾಮಾಯಣದಲ್ಲಿ ಬರುವ ಋಷಿಗಳು, ರಾಜರುಗಳು, ಪಾತ್ರಗಳು, ದ್ರಷ್ಟಾರರು, ಶಾಸ್ತ್ರಕರ್ತರು, ಪಶು-ಪಕ್ಷಿಗಳು ಇಂದಿಗೂ ನಮಗೆ ಪೂಜ್ಯವಾಗಿವೆ. ಅಲ್ಲಿ ಬರುವ ಎಲ್ಲ ವರ್ಗಗಳಲ್ಲಿನ ಸಾತ್ವಿಕರು ನಮಗೆ ಪೂಜನೀಯರು, ಶ್ರದ್ಧಾರ್ಹರು ಹಾಗೂ ಗೌರವಾರ್ಹರು.

ರಾಮನ ಕಥೆ ಕುಟುಂಬದ್ದು. ಆದರೆ ತ್ಯಾಗದ್ದು. ಇದು ಧರ್ಮ-ಸಂಸ್ಕೃತಿಗೆ ಆದರ್ಶವಾದದ್ದು. ಕುಟುಂಬಗಳಿಗೆ ಈ ಸಂದೇಶವಿಂದು ತಲುಪಬೇಕಾಗಿದೆ. ಇದು ಸಮಯದ ಅನಿವಾರ್ಯ ಆವಶ್ಯಕತೆಯಾಗಿದೆ. ಭಾರತೀಯ ಸಂಸ್ಕೃತಿಯ ಪ್ರಮುಖ ಘಟಕ, ತಳಹದಿ ಕುಟುಂಬ. ಇಂದು ಅದೇ ಛಿದ್ರವಾಗುತ್ತಿದೆ. ಸ್ಪರ್ಧಾತ್ಮಕ ಮನೋಭಾವ ಅರ್ಥಕಳೆದುಕೊಳ್ಳುತ್ತಿದೆ. ಇಂದು ಯಾವುದಕ್ಕೆ ಸ್ಪರ್ಧೆ ನಡೆದಿದೆ? ಇಡ್ಲಿ-ಕೋಳಿಮೊಟ್ಟೆ ನುಂಗಲು? ಅಧಿಕಾರದ ಮೂಲಕ ಫಿರಂಗಿ, ಹುಲ್ಲು, ಕಂಪ್ಯೂಟರ್, ಕಬ್ಬಿಣ, ಸಿಮೆಂಟ್ ನುಂಗಲು, ಆಟಗಳಲ್ಲಿ ಮ್ಯಾಚ್ ಫಿಕ್ಸಿಂಗ್ - ಒಟ್ಟಿನಲ್ಲಿ ಎಲ್ಲೆಡೆ ಭೋಗಕ್ಕೆ ಸ್ಪರ್ಧೆ. ದುಷ್ಟರ ಉಳಿವಿಗೆ ಪೈಪೋಟಿ ನಡೆದಿದೆ. ಜಾಗತಿಕ ಪ್ರಚಲಿತ ವಿದ್ಯಮಾನಗಳು ವಿಚಿತ್ರವಾಗಿವೆ. ಅಂದು ಅಯೋಧ್ಯೆಯಲ್ಲಿಯೂ ಸ್ಪರ್ಧೆ ನಡೆಯಿತು. ಸ್ಪರ್ಧೆ ಭೋಗದ್ದಲ್ಲ ತ್ಯಾಗದ್ದು. ಸಿಂಹಾಸನದ ಕಾಲ್ಚೆಂಡಿನಾಟ ನಡೆಯಿತು. ನನಗೆ ಬೇಡ-ನನಗೆ ಬೇಡವೆಂದು. ಧರ್ಮ, ಸಂಸ್ಕೃತಿ, ದೇಶ ಉಳಿಯುವುದು ತ್ಯಾಗ, ಪ್ರೀತಿಗಳಿಂದಲೇ ಹೊರತು ತರ್ಕ, ವಾದಗಳಿಂದಲ್ಲ. ರಾಮ ಪ್ರಜೆಗಳಿಗೆ ಕೊಟ್ಟ ಸ್ಥಾನಮಾನ ಎಂತಹದು? ಪ್ರಜೆಗಳು ರಾಮನ ಬಗ್ಗೆ ನಡೆದದ್ದು ಹೇಗೆ? ಮಂಥರೆಯ ಒಂದೇ ಒಂದು **vote** ಅಲ್ಲ ಕುಲಗೆಟ್ಟ ಮತದಿಂದ ರಾಜ್ಯವನ್ನು ಧಿಕ್ಕರಿಸಿ ಹಿಂತಿರುಗಿ ನೋಡದೆ ೧೪ ವರ್ಷ ಕಾಡಿಗೆ ಹೊರಟ. ರಾಮನೆಂದರೆ... ಅಗಣಿತ ಗುಣಗಣಭೂಷಿತ ರಾಮ; ಸೀತೆಯೆಂದರೆ ಕರುಣೆ, ಸೇವೆ; ಲಕ್ಷ್ಮಣನೆಂದರೆ ಭಕ್ತಿ, ಶ್ರದ್ಧೆ; ಭರತನೆಂದರೆ ಧರ್ಮ; ಹನುಮಂತನೆಂದರೆ ಕರ್ತವ್ಯ ಪ್ರಜ್ಞೆ; ಶತ್ರುಘ್ನನೆಂದರೆ ಪ್ರಜಾಹಿತ; ಯೋಗಿನಿಯರಾದ ಸುಮಿತ್ರೆ, ಶಬರಿ; ಮಿತ್ರತ್ವದಲ್ಲಿ ಗುಹ; ಸ್ತ್ರೀ ಸಂರಕ್ಷಣೆಗೆ ಜಟಾಯು; ಧರ್ಮಕ್ಕಾಗಿ ಪ್ರಾಣ ತೊರೆದ ಕಪಿ, ಕರಡಿಗಳು... ಅದೆಷ್ಟು ಉತ್ತಮ ನಡವಳಿಕೆಯ ಮೇಲ್ಪಂಕ್ತಿಗಳು...ಸಾವಿರಾರು. ಇವುಗಳಲ್ಲಿ ಒಂದನ್ನು ಆಚರಿಸಿದರೂ ನಾವು ಶ್ರೇಯಸ್ಕರವಾದ್ದನ್ನು ಮಾಡಿ ಸಮಾಜದ-ರಾಷ್ಟ್ರದ ಉತ್ಕರ್ಷದಲ್ಲಿ ಭಾಗಿಯಾದಂತೆ. ❖